**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬಾಗೇಪಲ್ಲಿ.**

**ಸಿ.ಸಿ. ಸಂಖ್ಯೆ:59/2015**

| | |
|---|---|
| ಫ್ರಾಸಾ | 19 |
| ಚಾಸಾ | 21 |

**ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ 08.01.2026.**

ಸಾಕ್ಷಿಯ ಹೆಸರು : ಆಶೋಕ
ತಂದೆಯ/ಗಂಡನ ಹೆಸರು : ಮಲ್ಲಪ್ಪ
ವಯಸ್ಸು : 41 ವರ್ಷ
ಉದ್ಯೋಗ : ಕೃಷಿ
ವಾಸಸ್ಥಳ : ಸಂಜೀವರಾಯನ ಹಳ್ಳಿ

**(ಆರೋಪಿಯು ಗೈರುಹಾಜರಿದ್ದು, ಆರೋಪಿ ಪರ ವಕೀಲರು ಆರೋಪಿಯ ಗುರುತು ಪತ್ತೆಗೆ ತಕರಾರು ಇಲ್ಲವೆಂದು ನುಡಿದಿದ್ದು, ಆದುದರಿಂದ ಸಾಕ್ಷ್ಯ ವಿಚಾರಣೆಗೆ ಅನುಮತಿ ನೀಡಲಾಯಿತು.)**

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದಃ**

ಬಾಗೇಪಲ್ಲಿ ಆಸ್ಪತ್ರೆಯಲ್ಲಿ ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದು ನುಡಿಯುತ್ತಾರೆ.

**ಪಾಟೀ ಸವಾಲು : ಶ್ರೀ ಕೆ.ಎಸ್.ಆರ್. ವಕೀಲರಿಂದ, ಆರೋಪಿ ಪರವಾಗಿಃ**

ಮೃತ ನಟರಾಜ್ ನನ್ನ ಸಹೋದರ. ನಾನು ಅಪಘಾತವನ್ನು ನೋಡಿದ್ದೇನೆ. ಅಪಘಾತ ಸ್ಥಳದಲ್ಲಿ 4 ಜನ ಇದ್ದರು. ನಂತರ ನಟರಾಜ್ ನನ್ನು ಬಾಗೇಪಲ್ಲಿ ಆಸ್ಪತ್ರೆಗೆ ಕರೆದುಕೊಂಡು ಬಂದೆವು. ಆಟೋದಲ್ಲಿ ನಾನು, ಚಾಸಾ-15 ಮತ್ತು ಚಾಸಾ17 ರವರು ನಟರಾಜ್

ಚಾಸಾ: 21 ಪ್ರಾಸಾ:19

ರವರನ್ನು ಕರೆದುಕೊಂಡು ಬಂದೆವು. ಚಾಸಾ–18 ರಾಧಮ್ಮರವರು ನಮ್ಮ ಜೊತೆ ಆಟೋದಲ್ಲಿ ಬರಲಿಲ್ಲ. ಆಟೋದ ಹಿಂಭಾಗದಲ್ಲಿ ನಾನು, ಚಾಸಾ–15 ಮತ್ತು ನಟರಾಜ್ ಕುಳಿತ್ತಿದ್ದೆವು. ಮುಂಭಾಗ ಆಟೋ ಚಾಲಕ ಕುಳಿತ್ತಿದ್ದರು ಎಂದು ನುಡಿಯುತ್ತಾರೆ. ಆಟೋವನ್ನು ಯಾರು ಕರೆಯಿಸಿದ್ದರು ಗೊತ್ತಿಲ್ಲ. ಆಟೋ ಯಾವ ಊರಿಗೆ ಸೇರಿತ್ತು ಗೊತ್ತಿಲ್ಲ.

ನಟರಾಜ್‌ರವರಿಗೆ ಬಾಗೇಪಲ್ಲಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿದರು. ನಂತರ ಆತನನ್ನು ಸರ್ಕಾರಿ ಆಂಬುಲೆನ್ಸ್ ನಲ್ಲಿ ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಆಂಬುಲೆನ್ಸ್‌ನಲ್ಲಿ ನಾನು ಚಾಸಾ–15 ಮತ್ತು 17 ರವರು ಹೋಗಿದ್ದೆವು.

ಎಂ.ಎಸ್. ರಾಮಯ್ಯ ಆಸ್ಪತ್ರೆಯಲ್ಲಿ ನಟರಾಜ್ 6 ತಿಂಗಳುಗಳ ಕಾಲ ಕೋಮದಲ್ಲಿ ಇದ್ದರು. ನಟರಾಜ್ ನನ್ನು ಆಸ್ಪತ್ರೆಯವರು ಬಿಡುಗಡೆಗೊಳಿಸಿದ್ದರು. ನಂತರ ಆತನನ್ನು ತಿಂಗಳಿಗೊಮ್ಮೆ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದೆವು. ನಟರಾಜ್ ಎಂ.ಎಸ್. ರಾಮಯ್ಯ ಆಸ್ಪತ್ರೆಯಲ್ಲಿ ಮೃತರಾದರು. ಎಂ.ಎಸ್. ರಾಮಯ್ಯ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ಮಾಡಲಿಲ್ಲ. ನಟರಾಜ್ ಯಾವಾಗ ಮೃತರಾದರು ಗೊತ್ತಿಲ್ಲ. ಮೃತ ದೇಹವನ್ನು ಮಂಜುನಾಥ, ಚಾಸಾ–18 ರವರು ತೆಗೆದುಕೊಂಡು ಬಂದರು. ಮೃತ ದೇಹ ಬರುವಷ್ಟರಲ್ಲಿ ನಾನು ಊರಿನಲ್ಲಿದ್ದೆ. ನಟರಾಜ್ ಊರಿನಲ್ಲಿ ಮೃತರಾಗಿಲ್ಲ. ಪೊಲೀಸರು ನನ್ನ ಹೇಳಿಕೆ ಪಡೆದಿದ್ದಾರೆ. ನನ್ನ ಹೇಳಿಕೆ ಸತ್ಯವಾಗಿದೆ.

**ಮರುವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬಾಗೇಪಲ್ಲಿ.